# ಮಾಸ್ತಿ

ಕನ್ಯಾಕುಮಾರಿಯಿಂದ ದೆಹಲಿಯವರೆಗೆ ಹತ್ತು ಹನ್ನೆರಡು ವರ್ಷಗಳ ಕಾಲ ಮನೆಗೇ ಹಿಂದಿರುಗದ ಅಲೆಮಾರಿಯಾಗಿ ನಾನು ಸುತ್ತಾಡಿಕೊಂಡಿದ್ದರೂ, ಮನೆಯವರು ನನ್ನನ್ನು ಸತ್ತೇಹೋದ ಎಂದು ತಿಳಿದುಕೊಂಡಿದ್ದಾಗ, ಕಾಶ್ಮೀರ ಕಲ್ಕತ್ತಾ ಬಿಟ್ಟು ಭಾರತದ ಉಳಿದೆಲ್ಲ ಕಡೆ ನಾನು ಒಬ್ಬ ಕಾರ್ಮಿಕ ಹುಡುಗನಾಗಿ ಅಡ್ಡಾಡಿದ್ದರೂ– ಬೆಂಗಳೂರನ್ನು ಮಾತ್ರ ನೋಡಿರಲಿಲ್ಲ. ಅದೇ ಒಂದು ಆಶ್ಚರ್ಯ; ವಿಶೇಷ ನನಗೆ.

ಈಗ ನಮ್ಮ ಹಳ್ಳಿಯಿಂದ ಬೆಂಗಳೂರನ್ನು ನೋಡಿಬರೋಣ ಎಂದು ಹೊರಟಾಗ ನಾನು ಸಾಹಿತಿಯಾಗಿದ್ದೆ. ನನ್ನ ಒಂದು ಕಾದಂಬರಿ ಪ್ರಕಟವಾಗಿತ್ತು. ಮಾಸ್ತಿಯವರ 'ಜೀವನ' ಪತ್ರಿಕೆಯಲ್ಲಿ ನನ್ನ ಆರು ಏಳು ಹಳ್ಳಿಯ ಚಿತ್ರಣಗಳು ಪ್ರಕಟವಾಗಿದ್ದವು.

ನಾನು ಮಾಸ್ತಿಯವರನ್ನು ನೋಡಲು ಅವರ ಮನೆಗೆ ಹೋದಾಗ 'ಓ, ನೀವಿನ್ನೂ ಯುವಕರು. ನಾನು ನಿಮ್ಮನ್ನು ವಯಸ್ಸಾದವರು ಎಂದು ಕೊಂಡಿದ್ದೆ' ಎಂದರು ಮಾಸ್ತಿ. ಆ ಬಳಿಕ ಅವರು ನನ್ನನ್ನು ಉದ್ದಕ್ಕೂ ಒಬ್ಬ ಕಿರಿಯ ತಮ್ಮನ ಹಾಗೆಯೇ ನೋಡಿಕೊಂಡರು.

ಈಗ ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟಕ್ಕೆ (ಬಿಎಂಶ್ರೀ ಅಚ್ಚುಕೂಟ) ನಾನು ಮೇಲ್ವಿಚಾರಕನಾಗಿ ಬಂದಾಗ, ಮೊದಲನೆಯ ಕೆಲಸ ಮಾಸ್ತಿಯವರ ಪುಸ್ತಕಗಳ ಮುದ್ರಣ ಕೆಲಸವನ್ನು ನಿಲ್ಲಿಸಿದ್ದು.

ಹೌದು, ಬಿಎಂಶ್ರೀ ಅಚ್ಚುಕೂಟದಲ್ಲಿಯೇ ಮಾಸ್ತಿಯವರ ಪುಸ್ತಕಗಳು ಎಲ್ಲವೂ ಅಚ್ಚಾಗುತ್ತ ಇದ್ದವು. ಪ್ರೆಸ್ ತುಂಬಾ ನಷ್ಟದಲ್ಲಿ ನಡೆಯುತ್ತ ಇದೆ. ಕೆಲವು ಸುಧಾರಣೆಗಳು ಆಗಬೇಕು– ಎಂದು ಪ್ರೆಸ್ ಕಮಿಟಿ ತೀರ್ಮಾನಿಸಿತು.



ನಿಘಂಟು ಮುದ್ರಣ ಜತೆಗೆ ಲಾಭದಾಯಕವಾದ ಬೇರೆ ಹೊರಗಿನವರ ಕೆಲಸಗಳನ್ನೂ ಮಾಡಬೇಕು ಎನ್ನುವ ತೀರ್ಮಾನ.

ಹಾಗೆಯೇ ಈ ಅಚ್ಚುಕೂಟದ ಮುದ್ರಣ ದರ ತುಂಬಾ ಹಳೆಯ ಕಾಲದ್ದು. ಆದುದರಿಂದ ಈಗಿನ ದರಕ್ಕೆ ಅದನ್ನು ಹೆಚ್ಚಿಸಬೇಕು.

ಅಷ್ಟೇ ಅಲ್ಲ, ಮಾಸ್ತಿಯವರಿಗೆ ಹಾಕುವ ಬಿಲ್ಲು ತುಂಬಾ ಕಡಮೆಯಾಗಿದೆ. ಅವರು ಹೊಸ ದರಕ್ಕೆ ಒಪ್ಪುತ್ತಾರೆಯೆ? ಒಪ್ಪಲಾರರು. ಅವರಿಗೆ ಕಾಗದ ಬರೆದು ತಿಳಿಸಬೇಕು– ಹೀಗೆ.

ವಾಸ್ತವವಾಗಿ ಮಾಸ್ತಿಯವರು ಮುದ್ರಣಕ್ಕೆ ಕೊಡುತ್ತ ಇದ್ದ ದರ ಇತರೇ ಪ್ರೆಸ್‌ಗಳಿಗಿಂತ ಸ್ವಲ್ಪ ಕಡಿಮೆಯೇ– ನಿಜ.

ಆದರೆ ಈಗ ಅವರಿಗೆ ಹಾಗೆ ಕಾಗದ ಬರೆಸುವುದು, ತಿಳಿಸುವುದು, ಅಧ್ಯಕ್ಷರೋ, ಕಾರ್ಯದರ್ಶಿಗಳೋ ಅಲ್ಲ– ನಾನೇ, ಯಾಕೆಂದರೆ ನಾನೇ ಅಲ್ಲವೆ ಈಗ ಪ್ರೆಸ್ಸಿನ ಮೇಲ್ವಿಚಾರಕನಾಗಿ ಇರುವುದು!

ಬಂತು ನನಗೆ ಗ್ರಹಚಾರ.

ಇಂಥ ಕೆಲಸ ನನ್ನ ಪಾಲಿಗೆ ಬಂದು ಬಿತ್ತಲ್ಲ ಎಂದು ಬಹಳವಾಗಿ ಪೇಚಾಡಿಕೊಂಡೆ. ಮನಸ್ಸಿಗೆ ತುಂಬಾ ಹಿಂಸೆ. ಹೇಗೆ